


# ದಾರಿ ಬಿಡಿ

■ ರವಿರಾಜ ಹಾಲಂಬಿ

ಚಿತ್ರ: ಶ್ರೀಕೃಷ್ಣ ಕೆದಿಲಾಯ

ದಾರಿ ಬಿಡಿ ದಾರಿ ಬಿಡಿ
ಉದಯ ಸೂರ್ಯ ಬಂದ
ಹಕ್ಕಿಗಳ ಚಿಲಿಪಿಲಿ
ಅರುಣ ರಾಗ ಚೆಂದ

ಬಿಟ್ಟೋಡಿತು ಕತ್ತಲು
ಬೆಳಕು ಎತ್ತಲೆತ್ತಲು
ರಾತ್ರಿ ಸುರಿದ ಇಬ್ಬನಿ
ಆವಿಯಾಯ್ತು ಫಕ್ಕನೆ

ಹೂವು ಅರಳಿ ನಗುತಿರೆ
ದುಂಬಿ ಬಳಿಗೆ ಸುಳಿದಿರೆ
ಪರಾಗ ಸ್ಪರ್ಶ ನಡೆದಿರೆ
ಧನ್ಯ ಬಾಳು ಫಲಿಸಿರೆ

ಕಾಯಕವೇ ಕೈಲಾಸ
ಎನುತ ಜಗವು ನಡೆಸಿರೆ
ತುತ್ತು ಚೀಲ ತುಂಬಿದೆ
ನೆಮ್ಮದಿಯು ನೆಲಸಿದೆ

ಹೋಗಬಿಡಿ ಹೋಗಬಿಡಿ
ದಣಿದ ಸೂರ್ಯನೀಗಲೇ
ಪಡುವಣ ಕಡಲಿಳಿಯಲಿ
ವಿಶ್ವ ವಿಶ್ರಾಂತಿ ಪಡೆಯಲಿ ■



## ಕುಂಚ ಪ್ರಪಂಚ



**ಸಿಂಚನಾ ದೇಶಪಾಂಡೆ**
10ನೇ ತರಗತಿ,
ಕೆ.ಇ. ಬೋರ್ಡ್ ಸ್ಕೂಲ್, ಧಾರವಾಡ









**ಶ್ರೀಪಾದ ಭಟ್**
1ನೇ ತರಗತಿ, ಜನಕ ಅಕಾಡೆಮಿ,
ಅರಕೆರೆ, ಬೆಂಗಳೂರು